# ಕೋಟೆ ಬಂಗಲೆಯಲ್ಲಿ ನೀರವ ಮೌನ

ಅದು ಕಾರ್ತಿಕ ಮಾಸವೊಂದರ ಮಧ್ಯಾಹ್ನದ ಸಮಯ. ಚುರುಕು ಬಿಸಿಲು ಸುತ್ತಲಿನ ಪರಿಸರವನ್ನು ಬೆಚ್ಚಗೆ ಕಾಯಿಸುತ್ತಿದ್ದರೆ ಹತ್ತಿರದಲ್ಲೇ ಇರುವ ವಿಸ್ತಾರವಾದ ಕೆರೆಯಂಗಳ ಬಿಸಿಲಿಗೆ ಮೈಯ್ಯೊಡ್ಡಿ ಬೆಚ್ಚಗಾಗತೊಡಗಿತ್ತು. ಕಲರವವನ್ನೆಬ್ಬಿಸುತ್ತಾ ಕೆರೆಯಲ್ಲಿ ಹಾರಾಟ, ನೀರಾಟಗಳಲ್ಲಿ ಕೆಲವು ನೀರಹಕ್ಕಿಗಳು ಮಗ್ನವಾಗಿದ್ದವು. ಕೆರೆದಂಡೆಯ ಕಲ್ಲು ಬಂಡೆಗಳು, ಕುರುಚಲು ಗಿಡಗಳು ನೀರಹಕ್ಕಿಗಳ ಸಂಭ್ರಮದಲ್ಲಿ ದೂರದಲ್ಲೇ ನಿಂತು ಭಾಗಿಯಾಗಿದ್ದವು. ಕೆರೆದಂಡೆಯ ಕೂಗಳತೆಯಲ್ಲಿರುವ ಕೋಟೆ ಬಂಗಲೆ ಚುರುಕು ಬಿಸಿಲಿಗೆ ತಲೆಯೆತ್ತಿ ಗಂಭೀರವಾಗಿ ನಿಂತಿತ್ತು. ಇದುವರೆಗೆ ಚಿಲಿಪಿಲಿಗುಟ್ಟುತ್ತಿದ್ದ ಬಂಗಲೆಯ ಗಿಡಮರಗಳ ಹಕ್ಕಿಗಳು ಆಹಾರವನ್ನರಸುತ್ತಾ ದೂರದೂರಕ್ಕೆ ಹಾರಿಹೋಗಿದ್ದರೆ ಪೊಟರೆಯಲ್ಲಿ ಉಳಿದುಕೊಂಡಿದ್ದ ಮರಿಹಕ್ಕಿಗಳ ಚಿಲಿಪಿಲಿ ಕ್ಷೀಣವಾಗಿ ಕೇಳಿ ಬರತೊಡಗಿತ್ತು. ಅದು ಬಿಟ್ಟರೆ ಅರಳಿದ ಬಣ್ಣ ಬಣ್ಣದ ಹೂಗಳ ಮೇಲೆ ಕುಳಿತುಕೊಂಡು ಮಕರಂದ ಹೀರುವ ದುಂಬಿ ಹಾಗೂ ಜೇನ್ನೊಣಗಳ ಗುಂಯ್ಗುಟ್ಟುವಿಕೆಯ ಸದ್ದು ಆ ಪರಿಸರದಲ್ಲಿ ಕೇಳಿ ಬರುತ್ತಿತ್ತು.

ಇಂಥ ಹೊತ್ತಿನಲ್ಲಿ ಯುವತಿಯೊಬ್ಬಳು ಕೈನೆಟಿಕ್ಕಿನಲ್ಲಿ ಕೋಟೆ ಬಂಗಲೆಯ ಗೇಟಿನ ಹತ್ತಿರ ಬಂದಿದ್ದಳು. ಅವಳೇ ಕೋಟೆ ಬಂಗಲೆಯ ರಾಜಕುಮಾರಿ ಋತು....27ರ ಹರೆಯದ, ಬೊಗಸೆ ಕಂಗಳ, ಹಾಲು ಬಿಳುಪಿನ, ನೀಳಕಾಯದ ಚೆಲುವೆ.

